ಕರ್ನಾಟಕ ಸರಕಾರ

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದಕ್ಷಿಣ ವಲಯ ಕಲಬುರಗಿ ಜಿ: ಕಲಬುರಗಿ

**Email:beosouthgulbarga@gmail.com** **phone:08472-255141**

**ಪತ್ರ ಸಂ:ಅ1:ಖಾಸಗಿ/ಮಾನ್ಯತೆ/ನವೀಕರಣ/174/2019-20** 392 ದಿ 08/09/2020 **ದಿನಾಂಕ:08/09/2020**

## ಜ್ಞಾಪನ

ವಿಷಯ: ಸಂತ ಜೇವಿಯರ್ಸ ಆಂಗ್ಲ ಮಾಧ್ಯಮ ಶಾಲೆಯ 2019-20ನೇ ಸಾಲಿಗೆ ಪ್ರಥಮ ಮಾನ್ಯತೆ ಕುರಿತು.

ಉಲ್ಲೇಖ: 01) ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಪತ್ರ ಸಂಖ್ಯೆ ಜಿ1(1)/ಖಾ.ಪ್ರಾ.ಶಾ:ಹೊ.ಶಾ:ಅನು:140/2018-19/921 ದಿನಾಂಕ:13/06/2019

02) ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರ ಹಿಂಬರಹ ಪತ್ರ ಪತ್ರ ಸಂಖ್ಯೆ ಜಿ1(1)/ಖಾ.ಪ್ರಾ.ಶಾ/ಹಿಂಬರಹ01/5463/2019-20/6076 ದಿ:23/12/2019

03) ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ:09/12/2019

04) ಸಂಬಂಧಿಸಿದ ಶಾಲಾ ಸಂಚಾಲಕರ ಪ್ರಸ್ತಾವನೆ ದಿನಾಂಕ:11/09/2019

05) ಶಿಕ್ಷಣ ಸಂಯೋಜಕರ ವರಧಿ ದಿನಾಂಕ:03/09/2020

******

ಪ್ರಸ್ತುತ ವಿಷಯಕ್ಕೆ ಸಂಬಮಧಿಸಿದಂತೆ ಉಲ್ಲೇಖ 01 ರಂತೆ ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರು ಕರ್ನಾಟಕ ಜೀಸಸ್ ಎಜ್ಯುಕೇಶನ ಸೊಸೈಟಿ ಸಿರನೂರ ತಾ॥ಕಲಬುರಗಿ ರವರ ಅಡಿಯಲ್ಲಿ ಸಂತ ಜೇವಿಯರ್ ಆಂಗ್ಲ ಮಾಧ್ಯಮ ಶಾಲೆ ಫರಹತಾಬಾದ ರಸ್ತೆ ಸಿರನೂರ ತಾ॥ ಕಲಬುರಗಿಯಲ್ಲಿ 2019-20ನೇ ಸಾಲಿಗೆ 1-8ನೇ ತರಗತಿಯ ವರೆಗೆ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಬಿಸಲು ಅನುಮತಿ ನಿಡಿರುತ್ತಾರೆ. ಅದರಂತೆ ಉಲ್ಲೇಖ 04ರನ್ವಯ ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಯವರು 2019-20ನೇ ಸಾಲಿಗೆ 1-2ನೇ ತರಗತಿಗೆ ಪ್ರಥಮ ಮಾನ್ಯತೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುವಂತೆ ಉಲ್ಲೇಖ 03 ರನ್ವಯ ಸದರಿ ಶಾಲಾ ಆಡಳಿತ ಮಂಡಳಿಯವರಿಗೆ 2019-20ನೇ ಸಾಲಿನಿಂದ 1-8ನೇ ತರಗತಿಯ ವರೆಗೆ ಆಂಗ್ಲ ಮಾಧ್ಯಮದಲ್ಲಿ ಏಕ ಕಾಲಕ್ಕೆ ಶಾಲಾ ಪ್ರಾರಂಬಿಸಲು ಅನುಮತಿ ನೀಡಿರುವ ಹಿಲೆಯಲ್ಲಿ, ಶಾಲಾ ಆಡಳಿತ ಮಂಡಳಿಯವರ ಪ್ರಸ್ತಾವನೆಯಂತೆ 2019-20ನೇ ಸಾಲಿಗೆ ಕೇವಲ 1-2ನೇ ತರಗತಿಗೆ ಮಾತ್ರ ಪ್ರಥಮ ಮಾನ್ಯತೆ ನೀಡಬಹುದೆಂಬುದರ ಕುರಿತು ಹಾಗೂ ಇನ್ನೂಳಿದ 3-8ನೇ ತರಗತಿಗೆ ಯವ ವರ್ಷದಿಂದ ಪ್ರಥಮ ಮಾನ್ಯತೆ ನೀಡಬಹುದೆಂಬುದರ ಕುರಿತು ಮಾರ್ಗದರ್ಶನ ಕೋರಿರುವಂತೆ ಉಲ್ಲೇಖ 02ರನ್ವಯ ಪ್ರಸ್ತುತವಾಗಿ ಯಾವ ತರಗತಿಗಳು ನಡೆಯುತ್ತಿವೆ ಅದೆ ತರಗತಿಗಳಿಗೆ ಪ್ರಥಮ ಮಾನ್ಯತೆ ನೀಡಲು ನಿಯಮಗಳ ಅಡಿಯಲ್ಲಿ ಅವಕಾಶ ಇರುವುದರಿಂದ ನಿಯಮಾನುಸಾರ ಕ್ರಮ ವಹಿಸುವಂತೆ ಮಾರ್ಗದರ್ಶನ ನೀಡಿರುವ ಹಿನ್ನಲೆಯಲ್ಲಿ ಉಲ್ಲೇಖ 05ರ ಪ್ರಕಾರ ಶಿಕ್ಷಣ ಸಂಯೋಜಕರ ವರದಿಯಾನುಸಾರ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ:-**

| ಕ್ರ.ಸಂ | ಶಾಲೆಯ ಹೆಸರು | ತರಗತಿ | ಮಾನ್ಯತೆ ವರ್ಷ |
|---|---|---|---|
| 01 | ಸಂತ ಜೇವಿಯರ್ಸ ಆಂಗ್ಲ ಮಾಧ್ಯಮ ಶಾಲೆ ಎನ್ ಎಚ್ 218 ಫರಹತಾಬಾದ ರಸ್ತೆ ಸಿರನೂರ ತಾ॥ ಕಲಬುರಗಿ(ದ.ವ) | 1 ರಿಂದ 8 ನೇ ತರಗತಿ (ಆಂಗ್ಲ ಮಾಧ್ಯಮ) ಶಾಶ್ವತ ಅನುದಾನ ರಹಿತ | 2019-20 ನೇ ಸಾಲಿಗೆ 1-2ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿದೆ |

**ಷರತ್ತುಗಳು:-**

1) ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯುಎಲ್ಲಾಜಿಲ್ಲಾ ನೊಂದಾಣಾಧಿಕಾರಿಗಳಿಂದ ಪ್ರತಿ ವರ್ಷ ನವೀಕರಿಸಿಕೊಳ್ಳತಕ್ಕದ್ದು.
2) ಶಾಲೆಯಲ್ಲಿಎಲ್ಲಾಜಾತಿ ಮಕ್ಕಳಿಗೆ ಸೇರ್ಪಡೆಯಾಗಲು ಮುಕ್ತ ಅವಕಾಶ ನೀಡತಕ್ಕದ್ದು.
3) ಇಲಾಖೆಯ ಪೂರ್ವಾನುಮತಿಇಲ್ಲದೆಯಾವುದೇ ತರಗತಿಗಳನ್ನು ತೆರೆಯತಕ್ಕದಲ್ಲ
4) ಶಾಲೆಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷಅನುಮೋದನೆಗೊಂಡಚಾರ್ಟಡ್‌ಅಕೌಂಟೆಟರವರಿಂದಅಡಿಟ್ ಮಾಡಿಸತಕ್ಕದ್ದು.

5) ಶಿಕ್ಷಣ ಕಾಯ್ದೆಯನ್ವಯ ಪ್ರತಿ ತರಗತಿಗಳಲ್ಲಿ ಮಕ್ಕಳ ಸಂಖ್ಯೆ 50:40:1 ಅನುಪಾತ ಹೊಂದಿರತಕ್ಕದ್ದು.
6) ನಿಗಧಿ ಪಡಿಸಿದ ಸ್ಥಿರ ನಿಧಿ ಜಂಟಿಖಾತೆಯಲ್ಲಿಠೇವಣಿಕರಿಸತಕ್ಕದ್ದು
7) ಕರ್ನಾಟಕ ಶಿಕ್ಷಣ ಮಸೂದೆಯಡಿರಚಿತವಾದಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ನಿಯಂತ್ರಣ ಮತ್ತು ಪಠ್ಯಕ್ರಮ ನಿಗಧೀಕರಣ ನಿಯಾಮಾವಳಿ 1995 ಮತ್ತುಕರ್ನಾಟಕ ಶಿಕ್ಷಣ ಸಂಸ್ಥೆಯ ಮಾನ್ಯತೆ ನಿಯಮಗಳು 1999 ರ) ಅಡಿಯಲ್ಲಿ ನಿಗದಿಪಡಿಸಿದಂತೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಹೊಂದಿರತಕ್ಕದ್ದು.
8) ಆಡಳಿತ ಮಂಡಳಿಯವರು ಇಲಾಖೆಯಎಲ್ಲಾ ನೀತಿನಿಯಮಗಳಿಗೆ ಬದ್ಧರಾಗಿರತಕ್ಕದ್ದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ದಕ್ಷಿಣ ವಲಯ ಕಲಬುರಗಿ

ಗೆ,

ಸಂಚಾಲಕರು
ಸಂತ ಜೇವಿಯರ್ಸ್ ಆಂಗ್ಲ ಮಾಧ್ಯಮ ಶಾಲೆ
ಎನ್ ಎಚ್ 218 ಫರಹತಾಬಾದ ರಸ್ತೆ ಸಿರನೂರ
ತಾ॥ ಕಲಬುರಗಿ(ದ.ವ)
ಪ್ರತಿ:
01.ಕಛೇರಿಯ ಕಡತಕ್ಕೆ